

# ಮಕ್ಕಳೇ ಯೋಜಿಸಲಿ ಪ್ರವಾಸ

**ಪ್ರವಾಸದ ಪ್ಲಾನಿಂಗ್‌ನಲ್ಲಿ ಮಕ್ಕಳು ಭಾಗವಹಿಸುವುದರಿಂದ ಮನರಂಜನೆಯ ಜೊತೆಗೆ ಕಲಿಕೆಯೂ ಸಾಧ್ಯವಾಗುತ್ತದೆ.**

■ ಸ್ವಯಂಪ್ರಭಾ

ಕೋವಿಡ್ ನಂತರದ ದಿನಗಳಲ್ಲಿ ಜನ ಪ್ರವಾಸದ ಬಗ್ಗೆ ಹೆಚ್ಚು ಉತ್ಸುಕರಾಗಿದ್ದಾರೆ. ಲಾಕ್‌ಡೌನ್‌ನ ಕಹಿ ನೆನಪುಗಳನ್ನು ಮರೆಯುವುದಕ್ಕೋ ಏನೋ, ಓಡಾಟವೆಂಬುದು ಹೆಚ್ಚು ಪ್ರಿಯವಾದಂತಿದೆ. 'ಮನೆಯೊಳಗೇ ಸೀಮಿತವಾಗಿದ್ದೇವೆ' ಎಂಬ ಭಾವನೆಯಿಂದ ಮನಸ್ಸನ್ನು ಹೊರತರುವುದಕ್ಕೆ ಜನರು ಪ್ರವಾಸದ ಮೊರೆ ಹೋದಂತಿದೆ. ಆದರೆ, ಕೌಟುಂಬಿಕ ಪ್ರವಾಸಗಳು ಮಕ್ಕಳ ಶಿಕ್ಷಣಕ್ಕೆ ತೊಡಕಾಗಬಾರದಷ್ಟೇ.

ಪ್ರವಾಸ ಹೋಗಲೆಂದು ಶಾಲೆಗೆ ರಜೆ ಹಾಕುವುದು ಒಂದು ಬಗೆಯ ಸಮಸ್ಯೆಯಾದರೆ, ಭೇಟಿ ನೀಡುವ ಸ್ಥಳಗಳಲ್ಲಿ ಪೋಷಕರು ಆಟ, ಮೋಜು ಮಸ್ತಿಗಳಿಗಷ್ಟೇ ಆದ್ಯತೆ ನೀಡಿದರೆ ಅದೂ ಒಂದು ರೀತಿಯ ನಷ್ಟವೇ ಸರಿ. ಪ್ರತಿ ಪ್ರವಾಸವನ್ನೂ ಮಕ್ಕಳ ಕಲಿಕೆಗೆ ಪೂರಕವಾಗಿ ರೂಪಿಸುವ ಸಾಧ್ಯತೆಯೊಂದು ಪೋಷಕರ ಮುಂದೆ ಇದ್ದೇ ಇರುತ್ತದೆ. ಈ ಸಾಧ್ಯತೆಯು ಕಾರ್ಯಗತವಾಗಬೇಕಾದರೆ, ಪ್ರವಾಸದ ಪ್ಲಾನಿಂಗ್‌ನಲ್ಲಿ ಮಕ್ಕಳ ಸಹಭಾಗಿತ್ವ ಇರಬೇಕು. ಆ ಅವಕಾಶವನ್ನು ಪೋಷಕರು ಕಲ್ಪಿಸಿಕೊಡಬೇಕು.

ಹೊಸ ಊರನ್ನು ನೋಡುವುದು, ಹೊಸ ಜಾಗವನ್ನು ನೋಡುವುದು ಮಕ್ಕಳಿಗೆ ತುಂಬಾ ಇಷ್ಟ. ಪ್ರವಾಸ ಹೋಗುವ ದಿನಕ್ಕಾಗಿ ಮಕ್ಕಳು ತುದಿಗಾಲಲ್ಲಿ ನಿಲ್ಲುತ್ತಾರೆ. ಉಡುಪುಗಳು, ಕನ್ನಡಕ, ಟೋಪಿಗಳನ್ನು ಜೋಡಿಸಿಕೊಳ್ಳುತ್ತ ತಯಾರಿ ಶುರು ಮಾಡುತ್ತಾರೆ. ಅಷ್ಟೇ ಅಲ್ಲ, ಪ್ರವಾಸವು ನಿಗದಿಯಾದ ದಿನದಿಂದಲೇ ಮಕ್ಕಳು ತಾವು ಹೋಗುವ ಜಾಗದ ಬಗ್ಗೆ ಅಮ್ಮನೊಡನೆ ಅಥವಾ ಅಪ್ಪನೊಡನೆ ಪ್ರಶ್ನೆಗಳನ್ನು ಕೇಳತೊಡಗುತ್ತಾರೆ. ಆ ಜಾಗ ಹೇಗಿದೆ, ಅಲ್ಲಿ ಊಟ ಹೇಗಿದೆ, ನಾವು ರೈಲಿನಲ್ಲಿ ಹೋಗುತ್ತೇವಾ, ಬಸ್ಸಿನಲ್ಲಾ, ಕಾರಿನಲ್ಲಾ... ಹೀಗೆ, ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳುತ್ತಾರೆ. ಅವರು ಹಾಗೆ ಪ್ರಶ್ನೆಗಳನ್ನು ಕೇಳುತ್ತ ತಮ್ಮ ಕುತೂಹಲವನ್ನು ವೃದ್ಧಿಸಿಕೊಳ್ಳುತ್ತಾ ಇರುವುದೇ ಸರಿಯಾದ ಕ್ರಮ.

ಐತಿಹಾಸಿಕ ಸ್ಥಳಗಳು, ಮನರಂಜನೆಯ ಸ್ಥಳಗಳು, ದೇವಸ್ಥಾನ ಅಥವಾ ಚರ್ಚ್, ಮಸೀದಿಗಳು, ಸಮುದ್ರದ ಕಿನಾರೆ, ಒಂದು ಸುಂದರ ರೆಸಾರ್ಟ್ – ಹೀಗೆ ಪ್ರವಾಸಕ್ಕಾಗಿ ದೊಡ್ಡವರು ಆಯ್ಕೆ ಮಾಡಿಕೊಳ್ಳುವ ಸ್ಥಳಗಳು ವಿಭಿನ್ನವಾಗಿರುತ್ತವೆ. ಆದರೆ ಹೀಗೆ ಆಯ್ಕೆ ಮಾಡಿಕೊಳ್ಳುವ ವಿಧಾನವನ್ನು ಪೋಷಕರು ಸ್ವಲ್ಪ ಬದಲಾಯಿಸಿಕೊಳ್ಳಬೇಕು.

ಶ್ರೀಕಾಂತ್ ಓರ್ವ ಬ್ಯಾಂಕ್ ಉದ್ಯೋಗಿ. ಅನಿತಾ ಮತ್ತು ಸುನೀತಾ ಎಂಬ ಪುಟಾಣಿಗಳಿಬ್ಬರೂ ಸದಾ ಓದಿನಲ್ಲಿ ಮುಂದೆಯಿದ್ದಾರೆ. ಇತಿಹಾಸದ ಪಾಠಗಳನ್ನು ಓದುತ್ತಾ ಅವರೇ ಯಾವ ಊರಿಗೆ ಪ್ರವಾಸ ಹೋಗಬೇಕೆಂದು ಚರ್ಚಿಸಿ ಅಪ್ಪನಿಗೆ ತಮ್ಮ ಆಯ್ಕೆಯನ್ನು ತಿಳಿಸುತ್ತಾರೆ. ಚಿತ್ರದುರ್ಗದ ಕೋಟೆ, ಪುರಿ ಜಗನ್ನಾಥ ದೇವಾಲಯ, ಶ್ರೀರಂಗ ಪಟ್ಟಣ, ಬೇಲೂರು, ಹಳೇಬೀಡು – ಹೀಗೆ ಮಕ್ಕಳು ಇಷ್ಟಪಟ್ಟ ಜಾಗಕ್ಕೆ ಹೋಗುವುದು ಶ್ರೀಕಾಂತ್ ದಂಪತಿಗೆ ಇಷ್ಟ. ಜೊತೆಗೆ ಅವರಮ್ಮ ಬಹಳ ವರ್ಷಗಳಿಂದ ಡೈರಿಯಂತಹ ಒಂದು ಪುಸ್ತಕವನ್ನು ನಿರ್ವಹಿಸುತ್ತಿದ್ದಾರೆ. ಅದರಲ್ಲಿ ಪ್ರತೀ ವರ್ಷ ಭೇಟಿ ನೀಡಿದ ಸ್ಥಳಗಳ ಕುರಿತು ತಮ್ಮ ಅನುಭವಗಳನ್ನು ಬರೆದಿಡುತ್ತಾರೆ. ತಾವು ಗ್ರಹಿಸಿದ ಮಾಹಿತಿಯನ್ನು ಅಥವಾ ಕೇಳಿ ತಿಳಿದುಕೊಂಡ ವಿಚಾರಗಳನ್ನು ಅಲ್ಲಿ ದಾಖಲಿಸುತ್ತಾರೆ. ಅದೇನೂ ಮಾಹಿತಿ ಪುಸ್ತಕವಲ್ಲ. ಪ್ರವಾಸದಿಂದ ಹಿಂತಿರುಗಿದ ಮೇಲೆ ಒಬ್ಬರಾದ ಮೇಲೆ ಒಬ್ಬರಂತೆ ಆ ಪುಸ್ತಕದಲ್ಲಿ ಒಂದು ಬರಹವನ್ನು ಬರೆಯಬೇಕು. ಅಮ್ಮ, ಅಪ್ಪನೂ ಕೆಲವು ಪುಟಗಳನ್ನು ಬರೆಯುತ್ತಾರೆ. ಮಕ್ಕಳೂ ಬರೆಯುತ್ತಾರೆ. ಹೀಗೆ ಒಂದು ಪುಸ್ತಕದಲ್ಲಿ ಹಲವು ಭೇಟಿಗಳ ವಿವರಗಳು ತುಂಬಿಕೊಂಡಿವೆ.

ಆ ಪುಸ್ತಕವು ಅವರು ಪ್ರವಾಸದ ಮೂಲಕ ಕಲಿತುಕೊಂಡ ವಿಚಾರಗಳ ಸಂಗ್ರಹವೂ ಹೌದು. ಅವರ ಕುಟುಂಬವು ಸಂತೋಷವಾಗಿ ಕಳೆದ ದಿನಗಳ ದಾಖಲೀಕರಣವೂ ಹೌದು.

ಅನಿತಾ ಮತ್ತು ಸುನೀತಾ ಪ್ರವಾಸ ಹೋಗುವುದಕ್ಕೆ ಮುನ್ನವೇ ಆ ಜಾಗದ ಬಗ್ಗೆ ಗೂಗಲ್‌ನಿಂದ ಮಾಹಿತಿ ಸಂಗ್ರಹಿಸುತ್ತಾರೆ. ಆ ಜಾಗದ ಐತಿಹ್ಯಗಳು, ಅಲ್ಲಿ ಸುತ್ತಮುತ್ತ ನೋಡಬಹುದಾದ ಇತರ ಜಾಗಗಳ ಕುರಿತು ತಿಳಿದುಕೊಳ್ಳುತ್ತಾರೆ. ಹೀಗೆ ಮಕ್ಕಳು ಪ್ರವಾಸದ ಪ್ಲಾನಿಂಗ್‌ನಲ್ಲಿ ತೊಡಗಿಸಿಕೊಳ್ಳುವುದರಿಂದ ಅವರ ಸಂತೋಷವೂ ಹೆಚ್ಚುತ್ತದೆ. ಮನೆಯವರೆಲ್ಲ ಒಟ್ಟಾಗಿ ಪ್ರವಾಸದಲ್ಲಿ ಭಾಗವಹಿಸಿದ ಅನುಭವವೂ ದೊರೆಯುತ್ತದೆ. ಅವರು ಆಯ್ಕೆ ಮಾಡಿಕೊಳ್ಳುವ ಸ್ಥಳಗಳು, ಭೇಟಿ ಮಾಡಿದ ಸ್ಥಳಗಳು ಪಠ್ಯದಲ್ಲಿ ಪ್ರಸ್ತಾಪವಾದಾಗ ಅವು ಕಲಿಕೆಯನ್ನೂ ಹೆಚ್ಚು ಆಪ್ಯಾಯಮಾನವಾಗಿಸುತ್ತವೆ. ತರಗತಿಯೊಳಗಿನ ಪಾಠಕ್ಕಿಂತ ಮಿಗಿಲಾದ ಅನುಭವವು ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತಿರುತ್ತದೆ.

ಪ್ರವಾಸದ ಸಂದರ್ಭದಲ್ಲಿ ನೆನಪಿಡಬೇಕಾದ ಮತ್ತೊಂದು ಅಂಶವೆಂದರೆ, ಆರೋಗ್ಯ. ಭೇಟಿ ನೀಡಿದ ಪ್ರದೇಶದಲ್ಲಿ ವಿಶೇಷವಾದ ತಿಂಡಿಗಳನ್ನು ಸವಿಯುವುದು ಸಾಮಾನ್ಯವಾಗಿ ಎಲ್ಲರೂ ಇಷ್ಟಪಡುವ ವಿಷಯ. ಅಲ್ಲಿನ ಸಂಸ್ಕೃತಿಯನ್ನು ಅರಿಯುವ ದೃಷ್ಟಿಯಿಂದ ಇದೊಂದು ಸಹಜವಾದ ಪ್ರಕ್ರಿಯೆ. ಆದರೆ, ಆ ತಿನಿಸುಗಳು ಮಕ್ಕಳ ಆರೋಗ್ಯಕ್ಕೆ ಹೊಂದಿಕೆಯಾಗುತ್ತವೋ ಇಲ್ಲವೋ ಎಂಬುದನ್ನು ಗಮನಿಸುವುದು ಒಳ್ಳೆಯದು. ಕುಡಿಯುವ ನೀರು, ಔಷಧಿ ಉಪಚಾರಗಳ ಬಗ್ಗೆ ಕಾಳಜಿ ವಹಿಸುವುದು ಇನ್ನೂ ಮುಖ್ಯ.

ಪ್ರತಿಕ್ರಿಯಿಸಿ: feedback@sudha.co.in